ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ಇದು ಯಾರಿಗೂ ಅರ್ಥವೇ ಆಗುತ್ತಿಲ್ಲ. ಸುಮ್ಮಸುಮ್ಮನೆ ಈ ಖರ್ಚುಮಾಡುತ್ತಿದ್ದೀರೆಂದು ಕಾಣುತ್ತದೆ. ನಾವು ಕೇಳುತ್ತಿರುವುದು ಏನೆಂದರೆ ಭಕ್ಷಾಕರಿಗೋಸ್ಕರ ಏನು ಹಣವನ್ನು ತೆಗೆದಿಟ್ಟಿದೆ ಅದನ್ನು ಏತಕ್ಕೆ ಪೂರ್ಣವಾಗಿ ಖರ್ಚುಮಾಡಿಲ್ಲ ಅವರಿಗೆಲ್ಲಾ ವಸತಿಸೌಕರ್ಯಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯ. ನೀವು ಸ್ವತ ಕಟ್ಟಡಗಳನ್ನು ಕಟ್ಟಿಸಿ ಕೊಡಬೇಕು ಸೈಟುಗಳನ್ನು ಕೊಡಿಸಬೇಕು. ನಾನಾದರೂ ಕೇಳುವುದಿಷ್ಟೆ, ನಮ್ಮ ಇಡೀ ರಾಜ್ಯದಲ್ಲಿರತಕ್ಕ ಎಲ್ಲ ಭಿಕ್ಷುಕರ ವಸತಿಸೌಕರ್ಯದ ಬಗ್ಗೆಯೂ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ಇದುವಂತ ರಾಜ್ಯಕ್ಕೆ ಲಾಭವಾಗುವಂಥ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಾ

ಶ್ರೀ ಪಿ. ವೆಂಕಟರಮಣ.—ಅದನ್ನು ಮಾಡುತ್ತೇನೆ.

Amount Spent on K.R.S. Right Bank Canal

716 SRI D. JAYADEVARAJ URS (Chamundeshwari) Will the Minister of State for Major and Medium Irrigation be pleased to state.—

(a) the amount spent on K.R.S. Right Bank Canal so far ;

(b) the number of acres of land acquired for digging the canal ;

(c) the amount of compensation paid so far ?

SRI B.B. CHIMMANAKATTI (Minister of State for Major & Medium Irrigation).—

(a) A sum of Re. 2,12,23,654 has been spent.

(b) 295 acres of land has been acquired so far.

(c) Rs. 73,552 has been paid so far towards crop compensation.

ಶ್ರೀ ಡಿ. ಜಯದೇವರಾಜ ಅರಸ್.—ಸ್ವಾಮಿ, ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ "೨,೧೨,೨೩,೬೫೪ ರೂ.ಗಳು ಖರ್ಚಾಗಿದೆ" ಎಂದು ಹೇಳಿದ್ದೀರಿ. ಇದೇ ರೀತಿ ನೀವುಖರ್ಚು ಮಾಡುತ್ತಾ ಹೋಗುವುದಾದರೆ ಇನ್ನು ಎಷ್ಟು ವರ್ಷಗಳಲ್ಲಿ ಮುಗಿಸುತ್ತೀರಿ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ವರುಣಾ ನಾಲೆಗೆ ಈಗಾಗಲೇ ನಾವು ೨.೬೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಅದರ ಅಂದಾಜು ಮೆಚ್ಚ ೨೫ ಕೋಟಿ. ಇನ್ನೂ ಏನು ಹಣ ಖರ್ಚು ಮಾಡುವುದಿದೆ ಆ ಹಣವನ್ನು ಒದಗಿಸಿ ಆದಷ್ಟು ಜಾಗ್ರತೆ ಅಂದರೆ ಇನ್ನು ೫-೬ ವರ್ಷಗಳಲ್ಲಿ ಈ ಕಾರ್ಯವನ್ನು ಮುಗಿಸಬೇಕೆಂದಿದ್ದೇವೆ.

ಶ್ರೀ ಡಿ. ಜಯದೇವರಾಜ ಅರಸ್.—೨೫ ಕೋಟಿ ರೂ. ಅಂದಾಜಿನ ಈ ಕೆಲಸಕ್ಕೆ ನೀವು ಸ್ವಲ್ಪ ಸ್ವಲ್ಪ ಹಣವನ್ನೇ ಕೊಡುತ್ತಾ ಹೋದರೆ ಇನ್ನು ಎಷ್ಟು ವರ್ಷಗಳಲ್ಲಿ ಈ ಕೆಲಸ ಮುಗಿಯುತ್ತದೆ ? ನೀವು ಹೆಚ್ಚು ಹೆಚ್ಚಾಗಿ ಹಣವನ್ನು ಒದಗಿಸದೇ ಹೋದರೆ ಇನ್ನು ೫೦ ವರ್ಷಗಳಾದರೂ ಇದು ಮುಗಿಯುವುದಿಲ್ಲ. ನಮಗೆ ನೀರು ಇದೆ. ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೀರಾ, ನಮ್ಮ ಕರ್ನಾಟಕ ರಾಜ್ಯ ಅಭಿವೃದ್ಧಿಯಾಗುವಂತೆ ಮಾಡುತ್ತೀರಾ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ವರುಣಾ ನಾಲೆ ಯೋಜನೆಗೆ ೧೯೭೯-೮೦ನೇ ಸಾಲಿನಿಂದ ೮೦ ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ. ಮೊನ್ನೆ ಮೈಸೂರಿನಲ್ಲಿ ನಡೆದಂಥ ಕ್ಯಾಬಿನೆಟ್ ಮೀಟಿಂಗ್‌ನಲ್ಲೂ ಕೂಡ ಈ ಯೋಜನೆಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ತೀರ್ಮಾನಿಸಿದ್ದೇವೆ. ಆದರ ಪ್ರಕಾರ ವರ್ಷಕ್ಕೆ ಕನಿಷ್ಟ ಪಕ್ಷ ೩ ಕೋಟಿ ರೂ.ಗಳನ್ನಾದರೂ ಕೊಡಲೇಬೇಕೆಂದು ಯೋಚಿಸಿದ್ದೇವೆ. ಇದರ ಮೇಲೆ ಕೊಡಬೇಕಾದರೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಕೊಡಬೇಕಾಗುತ್ತದೆ.

ಶ್ರೀ ಎಚ್. ಗಂಗಾಧರನ್.—ಕೆ. ಆರ್. ಎಸ್ ಬಲದಂಡೆ ನಾಲೆಯ ಯೋಜನೆಯು ಜೊತೆಗೆ ವಿಶ್ವೇಶ್ವರಯ್ಯ ನಾಲೆಯನ್ನು ರಿಪೇರಿ ಮಾಡತಕ್ಕಂಥ ಯೋಜನೆಯನ್ನು ಸೇರಿಸಿ ಎರಡು ಕೋಟಿ ಅರವತ್ತೈರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಹೇಳಿರುತ್ತೀರಿ. ಕೆ.ಆರ್.ಎಸ್. ನಾಲೆ ತೋಡುವುದಕ್ಕೆ ಮಾತ್ರ ಖರ್ಚುಮಾಡುವ ಹಾಗಿದ್ದರೆ ಎಷ್ಟು ಮೈಲಿಗಳಷ್ಟು ನಾಲೆಯನ್ನು ತೋಡಿದ್ದೀರಿ

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ವರುಣಾ ನಾಲೆ ಸುಮಾರು ಟೋಟಲ್ ಲೆನ್ತ್ ೧೩೫ ಕಿಲೋ ಮಿಾಟರ್ ತೋಡಬೇಕೆಂದು ಇರುತ್ತದೆ. ಇದರಲ್ಲಿ ಈಗಾಗಲೇ ೨೬ ಕಿಲೋ ಮಿಾಟರ್‌ಗಳಷ್ಟು ಟ್ರಾಕಲ್ ಮಾಡುವುದಕ್ಕೋಸ್ಕರವಾಗಿ ಎರಡು ಕೋಟಿ ಅರವತ್ತೈರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ಡಿ. ಜಯದೇವರಾಜ ಅರಸ್.—೨೬ ಕಿಲೋ ಮಿಾಟರ್ ದೂರ ನಾಲೆಯನ್ನು ತೋಡುವ ಸಲುವಾಗಿ ಟೆಂಡರನ್ನು ಕರೆದು, ಟೆಂಡರನ್ನು ತೀರ್ಮಾನ ಮಾಡಿರುವುದಾಗಿ ತಿಳಿದುಬಂದಿರುತ್ತದೆ. ಆಕ್ಸೆಪ್ಟ್ ಆಗಿರುವ ಟೆಂಡರ್ ೨ ಕೋಟಿ ೧೦ ಲಕ್ಷ ರೂಪಾಯಿಗಳು. ಕೆಲಸವನ್ನು ಆರಂಭಿಸದೆ, ಹೀಗೆಯೇ ಮುಂದಕ್ಕೆ ಬಿಟ್ಟುಕೊಂಡು ಹೋಗುತ್ತಿದ್ದರೆ ಮುಂದೆ ೪–೫ ಕೋಟಿ ರೂಪಾಯಿಗಳು ಆಗಬಹುದು. ಆದುದರಿಂದ ಇದನ್ನು ಕೂಡಲೇ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸರ್ಕಾರದ ಮುಖ್ಯ ಅಭಿಯಂತರವರಿಂದ ಶಿಫಾರಸು ಬಂದಿರುತ್ತದೆ. ಅದನ್ನು ಕೂಡಲೇ ಕಾರ್ಯಗತ ಮಾಡುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್.—ಈಗಾಗಲೇ ೨೯೫ ಎಕರೆ ಭೂಮಿಯನ್ನು ವಶಪಡಿಸಿಕೊಂಡು ಕ್ರಾಪ್ ಕಾಂಪನ್‌ಸೆಷನ್ ಕೊಡಲು ಒಪ್ಪಿಗೆಯನ್ನು ಕೊಟ್ಟಿದ್ದೇವೆಂದು ಹೇಳಿರುತ್ತೀರಿ. ೨–೩–೪–೫ ಎಕರೆ ಜಮೀನನ್ನು ಕಳೆದುಕೊಂಡಂಥ ಜಮೀನುದಾರರು ನಮ್ಮ ನಂಬಿಕೆಯ ಮೇಲೆ ಜಮೀನನ್ನು ಕೊಟ್ಟಿರುತ್ತಾರೆ. ಅವರಿಗೆ ಕ್ರಾಪ್ ಕಾಂಪನ್‌ಸೆಷನ್ ಕೊಟ್ಟಿಲ್ಲ. ಕೊಡದೆ ಹೋದರೆ ಅವರು ಜೀವನ ಮಾಡುವುದೇ ಕಷ್ಟವಾಗುತ್ತದೆ. ಅವರಿಗೆ ಹಣವನ್ನು ಏನು ಕೊಡಬೇಕಾಗಿರುತ್ತದೆ ಅದರಲ್ಲಿ ಕೊನೆ ಪಕ್ಷ ೭೫ ಪರ್ಸೆಂಟ್ ಹಣವನ್ನಾದರೂ ಕೊಡುವಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ ಈಗಾಗಲೇ ಸುಮಾರು ೩೦ ಕಿಲೋಮಿಾಟರ್ ಗಳಷ್ಟು ಜಮೀನುದಾರರಿಗೆ ಕಾಂಪನ್‌ಸೆಷನ್ ಕೊಟ್ಟಿರುತ್ತದೆ. ಇನ್ನು ೧೦೫ ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಕೆಲಸ ಮಾಡುತ್ತಿರುತ್ತಾರೆ. ಅದಷ್ಟು ಬೇಗ ಅವರಿಗೂ ಪೇಮೆಂಟ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಅದರ ಜೊತೆಗೆ ಒಪ್ಪಿಗೆ ಕೊಟ್ಟಿರತಕ್ಕಂಥ ಸುಮಾರು ಎಲ್ಲ ರೈತರಿಗೂ ಅನುಕೂಲವಾಗುವ ರೀತಿಯಲ್ಲಿ ಕ್ರಾಪ್ ಕಾಂಪನ್‌ಸೆಷನ್ ಈಗಾಗಲೇ ಕೊಟ್ಟಿದ್ದೇವೆ. ೨೯೫ ಎಕರೆಗೆ ಸುಮಾರು ೮೪ ಸಾವಿರದ ೩೧೫ ರೂಪಾಯಿ ಗಳಷ್ಟು ಕಾಂಪನ್‌ಸೆಷನ್ ಕೊಡುವುದಕ್ಕೆ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ರವರಿಂದ ಡಿಮ್ಯಾಂಡ್ ಇದೆ. ಅದನ್ನೂ ಕೂಡ ಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೆ ಈಗಾಗಲೇ ರಾಜ್ಯಪಾಲರ ಭಾಷಣದಲ್ಲಿ ಮೂವತ್ತು ಕೋಟಿ ರೂಪಾಯಿಗಳನ್ನು ಕಾವೇರಿ ಬೇಸಿನ್‌ಗಾಗಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ವರುಣಾ ನಾಲೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ, ಮತ್ತು ಈ ವರ್ಷ ಕ್ಯಾಬಿನೆಟ್ ಡಿಸಿಷನ್ ಪ್ರಕಾರ ಎಷ್ಟು ಮಂಜೂರಾಗಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮೂರು ಕೋಟಿ ರೂಪಾಯಿಗಳು ಮಂಜೂರಾಗಿರುತ್ತದೆ.

Construction of Roads and Bridges in Dharwad.

727. SRI BHAVU RAO DESHPANDE (Dharwad).—Will the Minister for Public Work be pleased to state:—

(a) the number of villages where there are no roads to go from one place to another place by bus in Dharwad taluk;